ಚಟುವಟಿಕೆ: 1 ಕೇಳೋಣ ಹೇಳೋಣ

ಅಭ್ಯಾಸ 1.1 ಕಥೆಯನ್ನು ಓದಿ ಉತ್ತರಿಸೋಣ.

ಒಂದು ಊರಿನಲ್ಲಿ ಕೇಶವ ಮತ್ತು ಮಾಧವ ಎಂಬ ಇಬ್ಬರು ಗೆಳೆಯರು ಒಂದು ದಿನ ದಾರಿಯಲ್ಲಿ ನಡೆಯುತ್ತಾ ಹೋಗುವಾಗ ಕೇಶವ ಒಂದು ಗಿಡವನ್ನು ನೋಡಿ ಮುಂದೆ ಈ ಗಿಡ ಏನಾಗಬಹುದು? ಎಂದು ಪ್ರಶ್ನಿಸಿದನು. ಅದಕ್ಕೆ ಮಾಧವ ಇದು ಬೆಳೆದು ದೊಡ್ಡಮರವಾಗಿ ಹಣ್ಣು ಕೊಡುತ್ತದೆ, ನೆರಳು ಕೊಡುತ್ತದೆ, ಗಾಳಿಯನ್ನು ಕೊಡುತ್ತದೆ ಎಂದು ಆ ಗಿಡವನ್ನು ಮೃದುವಾಗಿ ಸವರಿದನು.	
ತಕ್ಷಣವೇ ಕೇಶವ ಆ ಗಿಡವನ್ನು ಕಿತ್ತು ಬಿಸಾಕಿ ಈಗ ಹೇಳು ಏನಾಗುತ್ತದೆ? ಎಂದು ಆಶ್ಚರ್ಯ ಮಾಡಿದನು. ಮಾಧವ ಏನು ಮಾತನಾಡದೇ ಸುಮ್ಮನೆ ನಕ್ಕು ಮುಂದೆ ಸಾಗಿದ.	
ಸ್ವಲ್ಪ ದಿನಗಳ ನಂತರ ಮಾಧವ ಮತ್ತು ಕೇಶವ ಅದೇ ದಾರಿಯಲ್ಲಿ ಮರಳಿ ಬರುವಾಗ ಕೇಶವ ಕಿತ್ತು ಬಿಸಾಡಿದ್ದ ಗಿಡ ಬೆಳೆದು ನಿಂತಿರುತ್ತದೆ. ಇದನ್ನು ಗಮನಿಸಿದ ಕೇಶವ ಆಶ್ಚರ್ಯಚಕಿತನಾಗಿ ಇದು ಹೇಗೆ ಸಾಧ್ಯ? ಎಂದು ಮಾಧವನನ್ನು ಪ್ರಶ್ನಿಸುತ್ತಾನೆ.	

LIVEWORKSHEETS

ಆಗ ಮಾಧವ "ನೋಡು ನೀನು ಗಿಡವನ್ನು ಕಿತ್ತು ಬಿಸಾಕಿದ್ದೆ. ಆದರೆ ನಾವು ಮುಂದೆ ಹೋದ ನಂತರ ದಾರಿಯಲ್ಲಿ ಬರುವ ಯಾರೋ ಪುಣ್ಯಾತ್ಮರು ಮತ್ತೆ ಈ ಗಿಡವನ್ನು ನೆಟ್ಟಿರಬೇಕು. ಮಳೆ ಬಂದಾಗ ಮತ್ತೆ ಚಿಗುರಿದೆ ಮತ್ತೆ ಇನ್ನು ಯಾವತ್ತು ಗಿಡವನ್ನು ಕೀಳುವ ಪ್ರಯತ್ನಮಾಡಬೇಡ" ಎಂದು ಬುದ್ಧಿವಾದ ಹೇಳಿದನು.

1) ಈ ಕಥೆಯಲ್ಲಿ ನಿಮಗೆ ಇಷ್ಟವಾದ ಪಾತ್ರ ಯಾವುದು? ಮತ್ತು ಏಕೆ?

_____

_____

2) ನೀನೇ ಮಾಧವನಾಗಿದ್ದರೆ ಏನು ಮಾಡುತ್ತಿದ್ದೆ?

_____

_____

3) ಕಥೆಯ ಕುರಿತು ನಿಮ್ಮ ಅಭಿಪ್ರಾಯವನ್ನು ತಿಳಿಸಿರಿ.

_____

_____

_____

LIVEWORKSHEETS